ಕರ್ನಾಟಕ ವಿಧಾನ ಸಭೆ

367 ಶ್ರೀ ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್
ಮುಖ್ಯಮಂತ್ರಿ

ಅ) ಲೋಕಾಯುಕ್ತ ದಾಳಿಯಿಂದ ಅಮಾನತುಗೊಂಡ ಅಧಿಕಾರಿಗಳಿಗೆ ತನಿಖೆ ಪೂರ್ಣಗೊಳ್ಳದೆ ಇಲ್ಲಿಯವರೆಗೆ ಮರು ಸ್ಥಳ ನಿಯುಕ್ತಿಗೊಳಿಸಿರುವ ಅಧಿಕಾರಿಗಳ ವಿವರಣೆಗಳನ್ನು ನೀಡುವುದು;.

ದಿನಾಂಕ 1.7.2008 ರಿಂದ 7.7.2009 ರವರೆಗೆ 81 ದಾಳಿ ಪ್ರಕರಣಗಳು ದಾಖಲಾಗಿರುತ್ತವೆ. ಈ ದಾಳಿಗಳಿಂದಾಗಿ ಅಮಾನತ್ತುಗೊಳಿಸಲಾದ ಅಧಿಕಾರಿಗಳ ಪೈಕಿ 19 ಅಧಿಕಾರಿಗಳ ಅಮಾನತ್ತನ್ನು ತೆರವುಗೊಳಿಸಿ ಅವರನ್ನು ಮರುನೇಮಕ ಮಾಡಲಾಗಿದೆ.

ಆ) ಲೋಕಾಯುಕ್ತ ದಾಳಿ ನಂತರ ಅಮಾನತುಗೊಂಡ ಅಧಿಕಾರಿಗಳನ್ನು ಅದೇ ಸ್ಥಳದಲ್ಲಿ ಮರು ನಿಯುಕ್ತಿಗೊಳಿಸಿದ ಅಧಿಕಾರಿಗಳ ವಿವರಗಳನ್ನು ನೀಡುವುದು?

ಇಂತಹ ಪ್ರಕರಣಗಳು ಇರುವುದಿಲ್ಲ.

ಕರ್ನಾಟಕ ವಿಧಾನ ಸಭೆ

368 ಶ್ರೀ ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್
ಮಾನ್ಯ ಲೋಕೋಪಯೋಗಿ ಸಚಿವರು

ಅ) ಸೇಡಂ ತಾಲ್ಲೂಕಿನ ರಾಜ್ಯ ಹೆದ್ದಾರಿಗಳಾದ ವಾಗ್ದರಿ–ರಿಬ್ಬನಪಲ್ಲಿ ಮತ್ತು ವನಮಾರಪಲ್ಲಿ–ರಾಯಚೂರು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇವುಗಳನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು;

ಸೇಡಂ ತಾಲ್ಲೂಕಿನ ವಾಗ್ದರಿ–ರಿಬ್ಬನಪಲ್ಲಿ ಮತ್ತು ವನಮಾರಪಲ್ಲಿ–ರಾಯಚೂರು ರಾಜ್ಯ ಹೆದ್ದಾರಿಗಳು ರಾಜ್ಯ ಹೆದ್ದಾರಿಗಳ 3 ವರ್ಷದ ಪ್ಯಾಕೇಜ್ ನಿರ್ವಹಣೆ ಅಡಿಯಲ್ಲಿ ಸೇರ್ಪಡೆಯಾಗಿದ್ದು, 2006–07, 2007–08 ಮತ್ತು 2008–09ರ ಸಾಲುಗಳಲ್ಲಿ ನಿರ್ವಹಣೆ ಮಾಡಲಾಗಿರುತ್ತದೆ. ತದನಂತರದಲ್ಲಿ ರಾಜ್ಯ ಸರ್ಕಾರದ ಅನುದಾನದಿಂದ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದ್ದು, ರಸ್ತೆಗಳ ಗುಂಡಿಗಳನ್ನು ಮುಚ್ಚಿ ಸುಸ್ಥಿತಿಯಲ್ಲಿಡಲು ಕ್ರಮ ಜರುಗಿಸಲಾಗುತ್ತಿದೆ.

ವನಮಾರಪಲ್ಲಿ–ರಾಯಚೂರು ರಾಜ್ಯ ಹೆದ್ದಾರಿ ಕಿ.ಮೀ 140.00ರಿಂದ 150.00ರವರೆಗಿನ ಅಭಿವೃದ್ಧಿಗಾಗಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ ರೂ.150.00 ಲಕ್ಷಗಳ ಅನುದಾನ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಾಗ್ದಾರಿ–ರಿಬ್ಬನಪಲ್ಲಿ ರಾಜ್ಯ ಹೆದ್ದಾರಿಯ ಒಟ್ಟಾರೆ 141.2 ಕಿ.ಮೀಗಳನ್ನು ವಿ.ಜಿ.ಎಫ್ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.